ರಭಸದ ಸ್ವರಸಾಂಗತ್ಯಕ್ಕೆ ಹೊಂದಿಕೊಂಡ ಅದು ತನ್ನ ಪುಟ್ಟ ಪಾದಗಳನ್ನು ಎತ್ತಿಡುತ್ತಿತ್ತು.

ನವಿರಾಗಿ ಪಾರದರ್ಶಕವಾಗಿರುವ, ಕೆನ್ನೀಲಿ ರೆಕ್ಕೆಗಳ ಕೊಡತಿ ಹುಳುವಿನ ಗುಂಪೊಂದು ಸಡಗರದಿಂದ ಪುಷ್ಪಗಳ ಹೃದಯದಿಂದ ಮಧುವನ್ನು ಹೀರಲು ಹವಣಿಸುತ್ತಿದ್ದ ಜೇನ್ನೊಣಗಳ ಪಥವನ್ನು ಅಡ್ಡಗಟ್ಟಿತು. ಮಗು ಅವುಗಳನ್ನು ಎವೆಯಿಕ್ಕದೆ ದೃಷ್ಟಿಸುತ್ತ, ಖುಷಿಯಿಂದ ಅವುಗಳ ಹಿಂದೆ ಹಿಂದೆ ಲಗುಬಗೆಯಲ್ಲಿ ಓಡಿತು. ಅವುಗಳಲ್ಲಿ ಒಂದಾದರೂ ರೆಕ್ಕೆ ಮುದುರಿ ಕುಳಿತುಕೊಳ್ಳುವವರೆವಿಗೂ ಹಾಗೂ ಅವುಗಳಲ್ಲೊಂದನ್ನಾದರೂ ಹಿಡಿಯುವ ಇನ್ನಿಲ್ಲದ ಸಾಹಸದೊಂದಿಗೆ. ಆದರೆ ಅವು ಇನ್ನೇನು ಕೈಗೆ ಸಿಕ್ಕೇ ಬಿಟ್ಟವು ಎನ್ನುವಷ್ಟರಲ್ಲಿ ಬೆದರಿ ಪಟಪಟ ರೆಕ್ಕೆ ಬಡಿಯುತ್ತಾ, ಮೇಲಕ್ಕೂ-ಕೆಳಕ್ಕೂ ಆಡಿಸುತ್ತಾ ತೂಗಾಡುತ್ತಾ ಹಾರಿ ಹೋಗುತ್ತಿದ್ದವು. ಒಂದು ಕಪ್ಪು ವರ್ಣದ ಧೈರ್ಯಶಾಲಿ ಜೇನ್ನೊಣ, ಅವನನ್ನು ಆಟ ಆಡಿಸಲೋ ಎಂಬಂತೆ ಅವನ ಕಿವಿಯ ಸುತ್ತಾ ಗುಂಯ್‌ಗುಡುತ್ತಾ ಇನ್ನೇನು ಕ್ಷಣಾರ್ಧದಲ್ಲಿ ಅವನ ತುಟಿಗಳ ಮೇಲೆಯೇ ಅದು ಬಂದು ಕುಳಿತುಕೊಳ್ಳುವುದರಲ್ಲಿತ್ತು; ಆಗ ಅವನ ಅವ್ವ ಎಚ್ಚರಿಕೆಯ ದನಿಯಲ್ಲಿ: 'ಬಾ ಪಾಪು! ಬಾ, ದಾರೀಲಿ ನೋಡ್ಕೊಂಡು ಬಾ' ಎಂದಳು.



ಖುಷಿಯಿಂದ ಪುಟ್ಟ ಪುಟ್ಟ ಹೆಜ್ಜೆಗಳನ್ನಿಡುತ್ತಾ ಅವರೆಡೆ ಓಡಿದ ಅದು ಈಗ ಒಡನೆಯೇ, ಅವರಿಗಿಂತ ಒಂದಿಷ್ಟೂ ದೂರ ಮುಂದೋಗಿ ನಿಂತಿತಾದರೂ ಅಂತೂ ಹಿಂದೆ ಬಿದ್ದಿತು, ಕಾರಣ ಅದರ ಚಿತ್ತವನ್ನು ದಾರಿಯುದ್ದಕ್ಕೂ ಇದ್ದ ಸಣ್ಣ ಸಣ್ಣ ಕೀಟಗಳು, ಹುಳುಗಳು ತಮ್ಮ ತಮ್ಮ ನೆಲೆವೀಡಿನಿಂದ ಬಿಸಿಲು ಕಾಯಲು ಹೊರಬರುವ, ಒಳ ನುಸುಳುವ, ಅವುಗಳ ದೃಶ್ಯ ಅದು ಹಿಂದೆ ಬೀಳುವಂತೆ ಮಾಡಿತ್ತು. 'ಬಾ ಪಾಪು, ಬಾ' ತೋಪಿನ ನೆರಳಲ್ಲಿ ಬಾವಿಯ ಅಂಚಿನಲ್ಲಿ ಕುಳಿತ ಪೋಷಕರು ಕರೆದರು. ಅದು ಅವರೆಡೆ ಓಡಿತು.

ಅಲ್ಲೊಂದು ಹಳೆಯ ಕಾಲದ ಅಶ್ವತ್ಥ ವೃಕ್ಷ, ಘಮ ಘಮಿಸುವ ಸುವಾಸನೆಭರಿತ ಹಲಸಿನ ಮರ, ಜಮನ್, ಬೇವು, ಚಂಪಕ ಮತ್ತು ಸೇರಿಶ್ ಮರಗಳ ಮೇಲೆ ತನ್ನ ಭೀಮಬಲದ ರೆಂಬೆಕೊಂಬೆಗಳನ್ನು ಚಾಚಿತ್ತು. ಅಲ್ಲದೆ ಸುವರ್ಣಕಾಂತಿಯ ಸೋನಾಮುಖಿ ಹಾಗೂ ಕೆಂಪಡರಿದ ಗುಲ್‌ಮೊಹರ್ ಹೂ ಗೊಂಚಲುಗಳ ಮೇಲೂ ಅದು ವೃದ್ಧ ಅಜ್ಜಿ ಪುಟಾಣಿ ಮೊಮ್ಮಕ್ಕಳ ಮೇಲೆ ತನ್ನ ಸೆರಗನ್ನು ಹೊಚ್ಚಿದ ಹಾಗೆ ತನ್ನ ನೆರಳನ್ನು ಹೊಚ್ಚಿತ್ತು. ಕೆಂಪಡರಿದ ಪುಷ್ಪರಾಶಿ, ಮುಕ್ತವಾಗಿ ಸೂರ್ಯದೇವನಿಗೆ ತನ್ನ ಪ್ರೇಮಧಾರೆಯನ್ನು ಅರ್ಪಿಸಿತ್ತು. ಆದರೂ, ಅವು ತಮಗೆ ಸುರಕ್ಷತೆಯ ಆಶ್ರಯವಿದ್ದಾಗ್ಯೂ ತಮ್ಮನ್ನು ತಾವು ಅರ್ಧಂಬರ್ಧ ತೆರೆದುಕೊಂಡಿದ್ದವು; ಹಾಗೂ ಅವುಗಳ ಮೃದು ಮಧುರ ಪರಾಗಕೋಶ ಹಾಗೆ ಬಂದು ಹೀಗೆ ಹೋಗುವ ತಣ್ಣನೆಯ ಮಂದ ಮಾರುತದ ಬೀಸುಗಾಳಿಗೆ ಸಿಲುಕಿ ದಿಗಂತಕ್ಕೇರಿ ತೂರಿಹೋದವು.

ತೋಪಿನೊಳಗೆ ಮಗು ಕಾಲಿಡುತ್ತಿದ್ದಂತೆ ಅದರ ಮೇಲೆ ಬಿರಿದ ಪುಷ್ಪಗಳು ಸುರಿ ಮಳೆಗರೆದವು. ಈಗ ಅಪ್ಪ ಅಮ್ಮನನ್ನು ಮರೆತ ಅದು ತನ್ನ ಮೇಲೆ ಪುಷ್ಪ ದುಂದುಬಿಗರೆದ ದಳಗಳನ್ನು ಆಯಲು ಅಣಿಯಾಯಿತು, ಓ ನೋಡಿ! ನೋಡಿ! 'ಪಾರಿವಾಳ! ಪಾರಿವಾಳ!' ಎಂದು ಕೂಗಿತು ಅದು. ಜೋರಾಗಿ ಪಾರಿವಾಳಗಳ ಕೂಜನ ಕೇಳಿಸಿಕೊಂಡ ಅದು ತನ್ನ ಪೋಷಕರೆಡೆಗೆ ಓಡುತ್ತಾ! ಸುರಿಮಳೆಗೈದ ಪುಷ್ಪದಳ ಅವನ ಮರೆವು ಕೈಯಿಂದ ಕೆಳಗೆ ಉದುರಿದ್ದವು. ಅದೇ ವೇಳೆಗೆ ಕೋಗಿಲೆಯೊಂದು ಕೂಗಿ ತನ್ನ ಪ್ರಣಯಭಿಕ್ಷೆಯನ್ನು ಹೊರಹಾಕಿತು, ಅವನ ಅಪ್ಪ-ಅಮ್ಮನ ಮೊಗದಲ್ಲಿ ಕುತೂಹಲಕಾರಿ ನೋಟವಿತ್ತು ಆಗ.

'ಬಾ ಪಾಪು, ಬಾ' ಮಗುವನ್ನು ಅವರು ಕರೆದರು. ಅಶ್ವತ್ಥ ವೃಕ್ಷದ ಸುತ್ತ ಹುಚ್ಚು ಕುಣಿತ ಮಾಡುತ್ತಾ ಓಡುತ್ತಿದ್ದ ಅದನ್ನು ಈಗ ಅವರು ಹಿಡಿದು, ಇಕ್ಕಟ್ಟಾದ, ಸುತ್ತು ಬಳಸಿದ ಕಾಲುದಾರಿ ಮೂಲಕ ಸಾಸುವೆ ಹೊಲ